ಕವಿ ಮನಸು

## ಬಸಿರ ತುಡಿತ

ಒಡಲೊಳಗೆ ಅರಳುವ ಕರುಳ
ಕುಡಿಗಾಗಿ
ಪ್ರತೀ ತಾಯಿಯ ಮಿಡಿತ
ಕನಸು ನನಸಾಗಲು ದಿನ
ಹತ್ತಿರವೆಂದಾಗ
ಬೇಡವೆಂದರೂ ಹುಚ್ಚು ಕನಸುಗಳ
ಸೆಳೆತ

ಮೊದಲ ತಿಂಗಳಿಂದ ಆಸೆಗಳ
ಬೆನ್ನೇರಿ ಹೊರಟರೆ ಒಂಭತ್ತು
ಕಳೆದು
ಕಂದನ ನೋಡುವ ತವಕ
ಮನೆಯವರ ಆರೈಕೆ
ಹಾರೈಕೆಯಲೇ
ಕಳೆದು ಹೋಗುವ ಪುಳಕ

ಪ್ರತೀ ಮಾಸದಲೂ ಸಿಹಿ –ಹುಳಿ
–ಖಾರ
ಎಂಬ ಬಯಕೆಗಳ ಸಮ್ಮಿಳಿತ
ತಾಯಿಗೋ ಕಂದನ ಮನದಿಂಗಿತ
ಪೂರೈಸುವ ತುಡಿತ

ಒಡಲೊಳಗೆ ಹೊತ್ತ ಪ್ರತೀ ಕ್ಷಣವೂ
ಕೂಸಿನ ಚಲನೆಯ ಅನುಭಾವದಲಿ
ಮುಳುಗೇಳುವ ಖುಷಿಯಲಿ
ತಾಯ್ತನದ ಸಾರ್ಥಕತೆ ತಾಯಿಗೆ

ಕೂಸಿನ ಚೊಚ್ಚಲ ನಗು– ಅಳು
ನೋಡಲು,
ಮಮತೆಯ ಪ್ರೀತಿ ಧಾರೆಯಲಿ
ಕಂದನ ಮೀಯಿಸಲು
ಚೊಚ್ಚಲ ಬಸಿರ ಬಯಕೆಗಳ
ಹೊತ್ತು
ನವಮಾಸ ಕಾಯುತ್ತಾ ಕಂದನ
ಬರುವಿಕೆಯ
ಹಾದಿಯ ಎದುರು ನೋಡುತಿರುವೆ
ಅಮ್ಮಾ ಎಂಬ ಸಾಂಸಾರಿಕ
ಬಡ್ತಿಗಾಗಿ ದಿನಗಳನೆಣಿಸುತಿರುವೆ.

– ಲಕ್ಷ್ಮಿ ಗುರುರಾಜ್

## ಜೀವ

ನಮ್ಮಂತೆಯೆ ಬದಕಲು ಬಿಡಿ
ಇನ್ನೊಂದು ಜೀವವ
ಜೊತೆಗಿರುವವರಿಗೆ ಕೊಡದಿರಿ ನೋವ
ಮಕ್ಕಳ ಒಳಿತು ಬಯಸುವುದು ಹಿರಿಯ
ಜೀವ
ಅಗತ್ಯವಿರುವಷ್ಟು ಮಾತ್ರ ಬಳಸಿರಿ ನೀರ
ಉಳಿಸಿರಿ ನಮ್ಮ ಜೀವ ಜಲವ.

– ಸುವರ್ಣಾ ಭಟ್ಟ.




ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಅರಿವಿನ ಕದ ತೆರೆವ... ಘಂಟಾನಾದ

ದೇವಸ್ಥಾನಗಳನ್ನು ಪ್ರವೇಶಿಸಿದಾಗ ಜಂತಿಗೆ, ತೊಲೆ ಕಂಬಗಳಿಗೆ ತೂಗು ಹಾಕಿರುವ ಗಂಟೆಯನ್ನು ಬಾರಿಸಿ ಒಳಗೆ ಪ್ರವೇಶಿಸುವುದು ಹಿಂದಿನಿಂದಲೂ ನಡೆದು ಬಂದ ಪದ್ಧತಿ.ದೇವರ ಪೂಜೆಯ ಸಮಯದಲ್ಲಿ ಊದುಬತ್ತಿಯನ್ನು, ತುಪ್ಪದ ಬತ್ತಿಯನ್ನು ಬೆಳಗುತ್ತಾ, ಮಂಗಳಾರತಿಯನ್ನು ಮಾಡುವಾಗ ಗಂಟೆಯನ್ನು ಬಳಸುತ್ತಾರೆ. ಮಹಾ ಮಂಗಳಾರತಿ ಸಮಯದಲ್ಲಂತೂ ಗಂಟೆ, ಜಾಗಟೆ ಮತ್ತು ಇತ್ತೀಚೆಗೆ ಎಲೆಕ್ಟ್ರಾನಿಕ್ ಸಂಪರ್ಕವನ್ನು ಹೊಂದಿರುವ ಅತ್ಯಾಧುನಿಕವಾದ ಸಕಲ ವಾದ್ಯಗಳು ಏಕಕಾಲದಲ್ಲಿ ನುಡಿಸಲ್ಪಡುವ ಯಂತ್ರಗಳನ್ನು ಬಳಸಲಾಗುತ್ತಿದೆ.

ಆಗಮನಾರ್ತಂ ತು ದೇವಾನಾಂ
ಗಮನಾರ್ತಂ ತು ರಾಕ್ಷಸಮ್
ಕುವೆ9 ಘಂಟಾರವಂ ಭಕ್ತ್ಯ
ದೇವತಾಹ್ವಾನ ಲಾಂಛನಮ್

ಈ ಶ್ಲೋಕದ ಸಾರ ಹೀಗಿದೆ..... ಘಂಟಾನಾದವನ್ನು ಮಾಡುವುದರ ಮೂಲಕ ನಾನು ದೇವ ದೇವಿಯರನ್ನು ಆಹ್ವಾನಿಸುತ್ತೇನೆ. ತತ್ಪರಿಣಾಮವಾಗಿ ಧನಾತ್ಮಕ ಚಿಂತನೆಗಳು ಮತ್ತು ಉನ್ನತ ವಿಚಾರಗಳು ನನ್ನ ಹೃದಯ ಮತ್ತು ಮನೆಯನ್ನು ಪ್ರವೇಶಿಸಲಿ ಮತ್ತು ನನ್ನ ಮನದಲ್ಲಿರುವ ರಾಕ್ಷಸೀ ಪ್ರವೃತ್ತಿ ಮತ್ತು ಋಣಾತ್ಮಕ ವಿಚಾರಗಳು ನನ್ನ ಮನೆಯಿಂದ ಹೊರ ಹೋಗಲಿ ಎಂದು. ಗಂಟೆಯ ಆಕಾರವು ಸಾಂಕೇತಿಕವಾಗಿ ಅನಂತತೆಯನ್ನು ಸೂಚಿಸುತ್ತದೆ. ಅನಂತ ಎಂಬುದು ಅಗಾಧತೆ, ಅವಿನಾಶಿಯಾದ, ಎಂದೂ ಮುಗಿಯದ ಎಂಬ ಅರ್ಥವನ್ನು ಸೂಚಿಸಿದರೆ, ಗಂಟೆಯ ಒಳಭಾಗದಲ್ಲಿರುವ ನಾಲಿಗೆಯು ಜ್ಞಾನದ ಅಧಿದೇವತೆ ವಿದ್ಯಾಮಾತೆ ಸರಸ್ವತಿಯನ್ನು ಸೂಚಿಸುತ್ತದೆ. ಗಂಟೆಯ ಹಿಡಿಭಾಗದಲ್ಲಿ ಸಾಮಾನ್ಯವಾಗಿ ಶಂಖ, ಚಕ್ರ,ಗರುಡ,ಹನುಮ, ಸುದರ್ಶನ ಚಕ್ರ ಮತ್ತು ನಂದಿಯ ವಿಗ್ರಹಗಳನ್ನು ಕೆತ್ತಲಾಗಿರುತ್ತದೆ. ಅವರವರ ಇಷ್ಟ ದೈವದ ವಿಗ್ರಹವನ್ನು ಹೊಂದಿರುವ ಗಂಟೆಗಳನ್ನು ಬಳಸುತ್ತಾರೆ.

ಗಂಟೆಯನ್ನು ತಯಾರಿಸಲು ಸಪ್ರ ಧಾತುಗಳನ್ನು ಬಳಸುತ್ತಾರೆ. ಈ ಸಪ್ತ ಧಾತುಗಳಲ್ಲಿ ಒಂದೊಂದು ಧಾತುವೂ ಒಂದೊಂದು ಗ್ರಹವನ್ನು ಸಂಕೇತಿಸುತ್ತದೆ.

ಚಿನ್ನವು ಸೂರ್ಯನನ್ನು, ಬೆಳ್ಳಿಯು ಚಂದ್ರನನ್ನು, ಸೀಸವು ಶನಿ ಗ್ರಹವನ್ನು, ಕಬ್ಬಿಣವು ಮಂಗಳ ಗ್ರಹವನ್ನು, ತವರವು ಗುರು ಗ್ರಹವನ್ನು, ಪಾದರಸವು ಬುಧ ಗ್ರಹವನ್ನು ತಾಮ್ರವು ಶುಕ್ರ ಗ್ರಹವನ್ನು ಪ್ರತಿಪಾದಿಸುತ್ತದೆ.

ಶಿಲ್ಪ ಶಾಸ್ತ್ರದ ಪ್ರಕಾರ ಗಂಟೆಯನ್ನು ಪಂಚ ಧಾತುಗಳಿಂದ ತಯಾರಿಸಬೇಕು. ಚಿನ್ನ, ಬೆಳ್ಳಿ, ತಾಮ್ರ, ಸತು ಮತ್ತು ಉಕ್ಕಿನಿಂದ ಗಂಟೆಯನ್ನು ತಯಾರಿಸಬೇಕು. ಈ ಐದು ಧಾತುಗಳು ಅಥವಾ ಲೋಹಗಳು ಪಂಚಮಹಾಭೂತಗಳಾದ ಪೃಥ್ವಿ, ವಾಯು, ಅಗ್ನಿ, ಆಕಾಶ ಮತ್ತು ಜಲ ತತ್ವಗಳನ್ನು ಸಂಕೇತಿಸುತ್ತವೆ. ಈ ಧಾತುಗಳನ್ನು ಸರಿಯಾದ ಪ್ರಮಾಣದಲ್ಲಿ ಸೇರಿಸಿ ತಯಾರಿಸುವುದರಲ್ಲಿಯೇ ಗಂಟೆಯ ವೈಜ್ಞಾನಿಕ ಮಹತ್ವ ಅಡಗಿರುವುದು.


ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

ಗಂಟೆಯನ್ನು ಬಾರಿಸಿದಾಗ ಉಂಟಾಗುವ ಕಂಪನಗಳಿಂದ 'ಓಂ' ಎಂಬ ಶಬ್ದವು ಉತ್ಪತ್ತಿಯಾಗಿ ತನ್ನ ತರಂಗಾಂತರಗಳನ್ನು ಶಬ್ದದ ಮೂಲಕ ಎಲ್ಲೆಡೆ ಹರಡಿ ಮನಸ್ಸಿನಲ್ಲಿ ದಿವ್ಯಾನು ಭೂತಿಯನ್ನು ಮೂಡಿಸುತ್ತದೆ. ಪ್ರತಿ ಬಾರಿಯೂ ಗಂಟೆಯನ್ನು ಬಾರಿಸಿದಾಗ ಆ ಗಂಟೆಯೂ ಕನಿಷ್ಠ ಏಳು ಸೆಕೆಂಡುಗಳ ಕಾಲ ಗಟ್ಟಿಯಾದ ನಾದವನ್ನು ಹೊರಡಿಸುತ್ತದೆ. ಈ ರೀತಿಯ ನಾದ ತರಂಗಾಂತರದ ಕಂಪನಗಳು ಮೆದುಳಿನ ಎರಡು ಭಾಗಗಳಾದ ಬಲ



ಮತ್ತು ಎಡ ಮೆದುಳುಗಳಲ್ಲಿ ಏಕತೆಯನ್ನು ಉಂಟು ಮಾಡುತ್ತವೆ. ಆದ್ದರಿಂದಲೇ ಮೆದುಳು ತನ್ನೆಲ್ಲ ಕ್ರಿಯೆಗಳಿಂದ ಮುಕ್ತವಾಗಿ ಪ್ರಶಾಂತವಾಗುತ್ತದೆ.

ದೇವಸ್ಥಾನಗಳಲ್ಲಿ ವೈಜ್ಞಾನಿಕವಾಗಿ ಗಂಟೆಗಳನ್ನು ತಯಾರಿಸಿ ಬಳಸುವುದರಿಂದ ಘಂಟೆಯನ್ನು ಬಾರಿಸಿದಾಗ ಉಂಟಾಗುವ ನಾದದಿಂದ ತಲೆಯಲ್ಲಿನ ಯೋಚನೆಗಳೆಲ್ಲವೂ ಖಾಲಿಯಾದಂತೆನಿಸಿ ಮನಸ್ಸು ಶಾಂತ ಸ್ವರೂಪವನ್ನು ಹೊಂದುತ್ತದೆ.

ಕುಂಡಲಿನಿ ಯೋಗದ ಪ್ರಕಾರ ಗಂಟೆಯ ನಾದವು ನಮ್ಮ ದೇಹದಲ್ಲಿ ಸ್ಥಿತವಿರುವ ಏಳು ಚಕ್ರಗಳಾದ ಮೂಲಾಧಾರ ಚಕ್ರ, ಸ್ವಾದಿಷ್ಟಾನ ಚಕ್ರ, ಮಣಿಪೂರ ಚಕ್ರ, ಅನಾಹತ ಚಕ್ರ, ವಿಶುದ್ದಿ ಚಕ್ರ,ಆಜ್ಞಾ ಚಕ್ರ ಮತ್ತು ಸಹಸ್ರಾರ ಚಕ್ರಗಳನ್ನು ಶುದ್ಧಗೊಳಿಸಿ ಮೈ ಮನವನ್ನು ಶಾಂತಗೊಳಿಸುತ್ತದೆ. ಘಂಟಾನಾದವು ದೇಹದಲ್ಲಿರುವ ಶಕ್ತಿ ಮೂಲಗಳಲ್ಲಿ ಸಂಚರಿಸಿ ಚೈತನ್ಯವನ್ನು ಉದ್ದೀಪಿಸುತ್ತದೆ.

ಘಂಟಾನಾದವು ನಿಮ್ಮ ಆಂತರ್ಯದ ವ್ಯಕ್ತಿತ್ವವನ್ನು ಪರಿಚಯಿಸುತ್ತಾ ಬಾಹ್ಯದ ಗಲಭೆಗಳನ್ನು ನಿಯಂತ್ರಿಸುತ್ತಾ ಆಂತರಿಕವಾಗಿ ಸೆಳೆಯುತ್ತದೆ. ಎಲ್ಲವನ್ನು ಮರೆಸಿ ಅರಿವಿನ ಕದವನ್ನು ತೆರೆಯುತ್ತದೆ. ಆದ್ದರಿಂದಲೇ ದೇವಸ್ಥಾನವನ್ನು ಪ್ರವೇಶಿಸುತ್ತಲೇ ಎಲ್ಲರೂ ಗಂಟೆಯನ್ನು ಬಾರಿಸಿ ಒಳಗೆ ಹೋಗುವುದು. ಹಾಗೆ ಗಂಟೆಯನ್ನು ಬಾರಿಸುವ ಮೂಲಕ ನಮ್ಮೊಳಗಿನ ತಳಮಳಗಳನ್ನು ಹೊರ ಹೋಗಲು ಪ್ರಚೋದಿಸಿ ಸಂಪೂರ್ಣವಾಗಿ ನಮ್ಮ ಚಿತ್ತವನ್ನು ದೇವರತ್ತ ಹರಿಸಿ ಶುದ್ಧ ಮನಸ್ಕರಾಗಿ ದೇವರ ಸನ್ನಿಧಾನದಲ್ಲಿ ಧನ್ಯತಾ ಭಾವ, ಶಾಂತಿ, ಸಮಾಧಾನಗಳನ್ನು ಹೊಂದುವುದು. ಆದ್ದರಿಂದಲೇ ಹಿಂದೂ ಪುರಾಣದ ಪ್ರಕಾರ ಅಷ್ಟಮಂಗಳಗಳಲ್ಲಿ ಘಂಟಾನಾದವನ್ನು ಕೂಡ ಒಂದೆಂದು ಪರಿಗಣಿಸಲಾಗಿರುವುದು.

# ವಿಕಾಸ ಎಂಬ ಅರಳುವಿಕೆ

ನಾವು ಮಾನವನ ಮಾನಸಿಕ, ಬೌದ್ಧಿಕ ಮತ್ತು ಭಾವನಾತ್ಮಕ ವಿಕಾಸದ ಬಗೆಗೆ ಸಾಕಷ್ಟು ಓದಿದ್ದೇವಾದರೂ ವಿಕಾಸ ಎಂದರೇನು ಎಂಬುದರ ಬಗ್ಗೆ ನಮಗೆ ಸ್ಪಷ್ಟತೆ ಇರಬೇಕಾಗುತ್ತದೆ. ಅಂದರೆ ವಿಕಾಸವು ಬದಲಾವಣೆಗೊಳ್ಳುತ್ತಿರುವಂಥಹ ಒಂದು ಸತ್ಯ, ಆದರೆ ಸಿದ್ಧಾಂತವಲ್ಲ. ಇದು ಬದಲಾವಣೆಹೊಂದುವ ಜೈವಿಕ ಕ್ರಿಯೆಗಳು ಅಥವಾ ಭೌತಿಕ ಗುಣಲಕ್ಷಣಗಳಿಗೆ ಸಂಬಂಧಿಸಿದ ಅರ್ಥವನ್ನು ನೀಡುತ್ತದೆ. ಒಟ್ಟಾರೆಯಾಗಿ ವಿಕಾಸ ಎನ್ನುವುದು ತನ್ನ ವಿಶಾಲ ಅರ್ಥದಲ್ಲಿ ಎಲ್ಲ ಬಗೆಯ ಅಭಿವೃದ್ಧಿ, ಪ್ರಗತಿಯನ್ನು, ಜೊತೆಗೆ ಮಾನವನ ಆಂತರಿಕ ಮತ್ತು ಬಾಹ್ಯ ಜಗತ್ತನ್ನು ಒಳಗೊಂಡಂತಹ ವಿಶಾಲ ವ್ಯಾಪ್ತಿಯನ್ನು ಹೊಂದಿದೆ. ಇದನ್ನು ಅತೀ ಸರಳೀಕರಿಸಿ ಹೇಳುವುದಾದರೆ, ಸರಳವಾದ ಅಥವಾ ಕೆಳಹಂತದ ಸ್ಥಿತಿಯಿಂದ ಹೆಚ್ಚು ಸಂಕೀರ್ಣವಾದ ಅಥವಾ ಉತ್ತಮ ಸ್ಥಿತಿ ಎಡೆಗೆ ನಿರಂತರ ಬದಲಾವಣೆಯ ಪ್ರಕ್ರಿಯೆ ಎಂದು ಹೇಳಬಹುದು.



ಜಗತ್ತಿನ ಪ್ರತಿ ವ್ಯಕ್ತಿ,ಸಮಾಜ, ಧರ್ಮ, ದೇಶ ಎಲ್ಲವೂ ತಮ್ಮದೇ ಆದ ಲಯದಲ್ಲಿ ಮುಂದುವರೆಯುತ್ತಿರುವಾಗ ಪರಸ್ಪರರ ಮಧ್ಯೆ ಸಂಘರ್ಷಗಳು ಕಂಡುಬರುವುದು ಸಹಜ ಬೆಳವಣಿಗೆ. ಆದರೆ ವಿಕಾಸದ ಒಂದು ಪ್ರಕ್ರಿಯೆಯನ್ನು ನಾವು ಚೆನ್ನಾಗಿ ಅರಿತುಕೊಂಡಾಗ ಈ ಸಂಘರ್ಷಗಳ ಪ್ರಮಾಣಗಳು ಬಹಳಷ್ಟು ಕಡಿಮೆಯಾಗುವ ಸಾಧ್ಯತೆಗಳು ಇರುತ್ತವೆ.

ಹಾಗಾದರೆ ಈ ಒಂದು ಪ್ರಕ್ರಿಯೆಯಲ್ಲಿ ಜಗತ್ತು ತನ್ನಷ್ಟಕ್ಕೆ ತಾನೇ ಸಹಜವಾಗಿ ಮುಂದುವರೆಯುತ್ತಿರುವಾಗ ಸಮಸ್ಯೆ ಆವಿರ್ಭವಿಸುವುದಾದರೂ ಹೇಗೆ ಎಂದು ನೋಡುವುದಾದರೆ, ಉದಾಹರಣೆಗೆ ಒಬ್ಬ ಮಹಾನ್ ದಾರ್ಶನಿಕನು ತನ್ನ ಮಾನಸಿಕ, ಬೌದ್ಧಿಕ, ಭಾವನಾತ್ಮಕ ಸ್ಥಿತಿಯ ಔನತ್ಯದಲ್ಲಿ ಹೇಳುವುದೆಲ್ಲವನ್ನು ನಾವು ಪರಿಪೂರ್ಣವಾಗಿ ಅವರ ಸ್ಥಿತಿಗೆ ತಲುಪಿ ಅರ್ಥ ಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ. ಇಲ್ಲಿ ಎರಡು ಸಾಧ್ಯತೆಗಳಿರುತ್ತವೆ, ಒಂದು ಅವರು ಬೋಧಿಸಿದ ವಿಷಯಗಳು ಪೂರ್ತಿ ಅರ್ಥವಾಗದೇ ಇರುವುದು, ಮತ್ತೊಂದು ಅರ್ಥವಾದರೂ ಅವುಗಳನ್ನು ತಪ್ಪಾಗಿ ಗ್ರಹಿಸಿರುವುದು. ಆದರೆ ಅವರ ಸಿದ್ಧಾಂತ ಅಥವಾ ಬೋಧನೆಗಳನ್ನು ಪರಿಪೂರ್ಣ ಅರ್ಥ ಮಾಡಿಕೊಳ್ಳುವವರ ಸಂಖ್ಯೆ ತೀರ ಕಡಿಮೆ, ಇದ್ದರೂ ಬೆರಳೆಣಿಕೆಯಷ್ಟು. ಏಕೆಂದರೆ ಪ್ರತಿಯೊಬ್ಬರೂ ತಮ್ಮದೇ ಆದ ವಿಕಸನದ ಯಾನದಲ್ಲಿ ಸಾಗುವಾಗ ಅವರವರ ಗ್ರಹಿಕೆಯು ಅವರವರ ಮಟ್ಟದ್ದೇ ಆಗಿರುತ್ತದೆ. ಈ ಕಾರಣಕ್ಕಾಗಿಯೇ ಸಂಘರ್ಷಗಳು ಸದಾ ನಡೆಯುತ್ತಲೇ ಇರುತ್ತವೆ.


ಗುರು ಹಿರೇಮಠ
ಲೇಖಕರು, ಹಗರಿಬೊಮ್ಮನಹಳ್ಳಿ

ನಮ್ಮಲ್ಲಿನ ಒಂದು ದೌರ್ಬಲ್ಯವೇನೆಂದರೆ ನಮ್ಮ ಅಪೂರ್ಣ ದೃಷ್ಟಿಯನ್ನು ನಾವೇ ಸದಾ ಒಪ್ಪದಿರುವುದು, ಕಾರಣ ನಮ್ಮ' ಅಹಂ' ಕೇಂದ್ರಿತ ವೈಯಕ್ತಿಕ ಹಾಗೂ ಸಾಮಾಜಿಕ ಮನಸ್ಥಿತಿ ಅತ್ಯಂತ ಬಲಿಷ್ಠವಾಗಿರುವುದು. ಆದ್ದರಿಂದ ಈ ಒಂದು ಪೂರ್ಣಗ್ರಹಿಕೆಯು ಅತ್ಯಂತ ಪ್ರಯಾಸದಾಯಕವಾಗಿರುವುದರಿಂದ ನಾವು ಕಂಡುಕೊಳ್ಳುವ ಅತ್ಯಂತ ಸರಳ ಮಾರ್ಗವೇನೆಂದರೆ ಆ ಎಲ್ಲಾ ಬೋಧನೆ, ಸಿದ್ಧಾಂತಗಳನ್ನು ನಂಬುವುದು ಇಲ್ಲವೇ ನಂಬದೇ ಇರುವುದು.ಆದರೆ ಈ ನಂಬಿಕೆಗಳು ಅಥವಾ ಅಪನಂಬಿಕೆಗಳು ನಮ್ಮ ಮಾನಸಿಕ ಸ್ಥಿತಿ ಹೊರತು ವಿಕಾಸದ ಸ್ಥಿತಿಯಲ್ಲ. ಈ ಸೂಕ್ಷ್ಮವಾದ ಸತ್ಯವನ್ನು ನಾವು ಅರ್ಥಮಾಡಿಕೊಳ್ಳಲೇಬೇಕಾಗುತ್ತದೆ.

ನಮ್ಮ ನಂಬಿಕೆಗಳು ನಮಗೊಂದಿಷ್ಟು ಫಲ ನೀಡುವುದು ಅದು ಅವುಗಳ ಗುಣ ಹಾಗೂ ಅದು ಸಹಜವು ಆದುದು. ಆದರೆ ಎಲ್ಲಕ್ಕಿಂತ ಹೆಚ್ಚಾಗಿ ನಾವು ತಿಳಿಯಬೇಕಾದ ಅಂಶವೇನೆಂದರೆ, ಒಬ್ಬ ವ್ಯಕ್ತಿಯು ಒಬ್ಬರ ಬೌದ್ಧಿಕ ವಿಚಾರಗಳನ್ನು ಒಪ್ಪಿಕೊಂಡಿರಬಹುದು, ಮಾನಸಿಕವಾಗಿ ಆ ವ್ಯಕ್ತಿಯನ್ನು ಬಹುವಾಗಿ ಮೆಚ್ಚಿಕೊಂಡಿರಬಹುದು. ಆದರೆ ಇದು ಕೇವಲ ಮನಸ್ಸಿನ ಒಂದು ಪ್ರಕ್ರಿಯೆಯಾಗಿದ್ದರೆ ಇದರಿಂದ ಯಾವುದೇ ರೀತಿಯ ಬದಲಾವಣೆ ಹೊಂದಲು ಸಾಧ್ಯವಾಗುವುದಿಲ್ಲ. ಮತ್ತು ನಮ್ಮನ್ನು ವಿಕಾಸದ ಉನ್ನತ ಸ್ಥಿತಿಗೆ ಈ ಮನೋಭಾವ ಕೊಂಡೊಯ್ಯುವುದಿಲ್ಲ. ಇದು ನಮ್ಮೊಳಗಿನ ಸಂಪೂರ್ಣತೆಯನ್ನು ಹೊರತೆಗೆಯುವುದಿಲ್ಲ. ಬದಲಾಗಿ ಈ ತೆರನಾದ ನಂಬಿಕೆ ಸುಮ್ಮನೆ ಆ ಸಿದ್ಧಾಂತಗಳ ಬಗ್ಗೆ ಒಂದು ಮಾನಸಿಕ ಸಂಪರ್ಕವನ್ನು ಮಾತ್ರ ಸಾಧಿಸಿರುತ್ತದೆ . ಹೇಗೆಂದರೆ ಒಂದು ಮೊಗ್ಗು ಹೂವಿನ ಬಗೆಗೆ ಸ್ವಲ್ಪಮಟ್ಟಿಗೆ ಓದಿ, ತಿಳಿದುಕೊಂಡು ತಾನು ಹೂ ಎಂದು ಭಾವಿಸಿದರೆ ಅದು ಹೂವಾಗುವುದಿಲ್ಲ. ಆದ್ದರಿಂದ ವಿಕಾಸ ಎನ್ನುವುದು ತನ್ನದೇ ಲಯದಲ್ಲಿ ಸಾಗುವ ಒಂದು ನಿರಂತರ ಪ್ರಕ್ರಿಯೆ. ಹೂವಿನ ಹಾಗೆ ಸಹಜವಾಗಿ ಅರಳುವಂಥದ್ದು, ಜೊತೆಗೆ ತನ್ನ ಪರಿಮಳವನ್ನು ಎಲ್ಲೆಡೆ ಬೀರುವಂತದ್ದು.